ಓ ಎಸ್ ನಂ.19/2024

ಡಿ.ಡಬ್ಲ್ಯೂ-1 ಗಫೂರ ತಂದೆ ರಾಜಅಹಮದ ಪಟೇಲ್

**(ಇಂದು ದಿನಾಂಕಃ 19-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಜಿ ಹೆಚ್ ವಕೀಲರಿಂದ.

ನಾನು ಕನ್ನಡದಲ್ಲಿ ನನ್ನ ಸಹಿಯನ್ನು ಮಾಡುತ್ತೇನೆ. ನಾನು ಗಫೂರ ಪಟೇಲ್ ಎಂದು ಸಹಿ ಮಾಡುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಸಹಿ ಮಾಡಲು ಮಾತ್ರ ಬರುತ್ತದೆ ಎನ್ನುತ್ತಾರೆ. ಜಾಫರಪಟೇಲ್ ಮತ್ತು ರಾಜಅಹಮದ ಬೇರೆಯಾಗಿದ್ದರು ಎಂದರೆ ಸರಿ. ಜಾಫರಪಟೇಲ್ ರವರಿಗೆ ೮ ಎಕರೆ ೨೫ ಗುಂಟೆ ಜಮೀನು ಪಾಲಿಗೆ ಹೋಗಿತ್ತು ಎಂದರೆ ಸರಿ. ಸಾಕ್ಷಿಯು ಅವರು ಅದನ್ನು ಶಾಂತಪ್ಪ ಬಸವಂತರಾವ್ ರವರಿಗೆ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ಶಾಂತಪ್ಪರವರು ಚಂದ್ರಕಾಂತರವರಿಗೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಚಂದ್ರಕಾಂತರವರು ಸದರಿ ಜಮೀನನ್ನು ತಮ್ಮ ಮಕ್ಕಳಿಗೆ ಪಾಲು ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿ.

೨. ಒಟ್ಟು ೧೪ ಎಕರೆ ೩ ಗುಂಟೆ ಜಮೀನಿನಲ್ಲಿ ಜಾಫರಪಟೇಲ್ ರವರ ೮ ಎಕರೆ ೨೫ ಗುಂಟೆ ಮಾರಾಟವಾಗಿ ಉಳಿದ ಜಮೀನು ನಮ್ಮ ತಂದೆಯವರ ಪಾಲಿಗೆ ಬಂದಿತ್ತು ಎಂದರೆ ಸರಿ. ನಮ್ಮ ತಂದೆ ರಾಜಅಹಮದರವರೂ ಕೂಡಾ ಶಾಂತಪ್ಪರವರಿಗೆ ೪ ಎಕರೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ೪ ಎಕರೆ ಜಮೀನನ್ನು ಶಾಂತಪ್ಪರವರು ಚಂದ್ರಕಾಂತರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ನಮ್ಮ ತಂದೆ ಜಮೀನು ಮಾರಾಟ ಮಾಡಿಯೆ ಇಲ್ಲ ಎನ್ನುತ್ತಾರೆ.

೩. ಖರೀದಿ ಪತ್ರದಂತೆ ಖರೀದಿದಾರರ ಹೆಸರು ಪಹಣಿಯಲ್ಲಿ ನಮೂದು ಆಗಿವೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಜಮೀನು ಮಾರಾಟ ಮಾಡಿದ ವಿಚಾರ ಈ ದಾವೆ ಹಾಕಿದ ನಂತರವೂ ಕೂಡಾ ನನಗೆ ಗೊತ್ತಾಗಿಲ್ಲ. ನಾನು ದಾವಾ ಆಸ್ತಿ ಪಹಣಿಗಳನ್ನು ನೋಡಿರುತ್ತೇನೆ. ಸಾಕ್ಷಿಯು ನಮ್ಮ ಹೆಸರಿನಲ್ಲಿ ಪಹಣಿ ಸರಿಯಾಗಿ ಇರುತ್ತದೆ ಎನ್ನುತ್ತಾರೆ. ನಮ್ಮ ತಂದೆ ಜಮೀನು ಮಾರಾಟ ಮಾಡಿದ ವಿಚಾರ ಗೊತ್ತಿದ್ದರೂ ಸಹ ವಾದಿಗಳ ಪಾಲಿನ ಜಮೀನನ್ನು ಹೊಡೆಯುವ ಉದ್ದೇಶದಿಂದ ನಾನು ತಹಶೀಲ್ದಾರ ಕಛೇರಿಗೆ ಒಂದು ಅರ್ಜಿ ನೀಡಿದ್ದೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಜಾಫರಪಟೇಲ್ ರವರು ತಮ್ಮ ಪಾಲಿನ ಜಮೀನು ಮಾರಿರುತ್ತಾರೆ ಎಂದು ನಾನು ಬರೆಸಿರುತ್ತೇನೆ. ನಮ್ಮ ತಂದೆಯ ಪಾಲಿನ ೫ ಎಕರೆ ಮೇಲೆ ಗುಂಟೆ ಜಮೀನಿನಲ್ಲಿ ೪ ಎಕರೆ ನಮ್ಮ ತಂದೆ ಮಾರಾಟ ಮಾಡಿದ ನಂತರ ನಮಗೆ ಕೇವಲ ೧ ಎಕರೆ ೮ ಗುಂಟೆ ಜಮೀನು ಮಾತ್ರ ಉಳಿದಿದೆ ಎಂದರೆ ನನಗೆ ಗೊತ್ತಿಲ್ಲ.

೪. ನಮ್ಮ ತಂದೆಗೆ ೭ ಎಕರೆ ಮೇಲೆ ಗುಂಟೆ ಜಮೀನು ಬಂದಿರುತ್ತದೆ. ಸಾಕ್ಷಿಯು ಹಾದಿಯ ಸಲುವಾಗಿ ನಮ್ಮ ಕಾಕ ಜಾಫರಸಾಬರವರಿಗೆ ಸ್ವಲ್ಪ ಹೆಚ್ಚಿಗೆ ಜಮೀನು ನೀಡಲಾಗಿದೆ ಎನ್ನುತ್ತಾರೆ. ನಮ್ಮ ತಂದೆಗೆ ನಾನು ನನ್ನ ಪ್ರತಿವಾದ ಪತ್ರದಲ್ಲಿ ತಿಳಿಸಿದಂತೆ ೭ ಎಕರೆ ೩೮ ಗುಂಟೆ ಜಮೀನು ಇರಲೆ ಇಲ್ಲ ಎಂದರೆ ಸರಿಯಲ್ಲ. ನಾವು ಕೇವಲ ೧ ಎಕರೆ ೮ ಗುಂಟೆ ಜಮೀನಿನ ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ.

೫. ನಮ್ಮ ಊರಿನಲ್ಲಿ ಧರ್ಮಣ್ಣ ತಂದೆ ಭೀಮಣ್ಣ ಪೂಲಾರಿ ಎಂದು ಇರುತ್ತಾರೆ ಎಂದರೆ ಸರಿ. ಸಾಕ್ಷಿಯು ಅವರು ಈಗ ಮೃತರಾಗಿರುತ್ತಾರೆ ಎನ್ನುತ್ತಾರೆ. ಸದರಿ ಧರ್ಮಣ್ಣರವರ ಮಗ ಭೀಮಣ್ಣ ಇರುತ್ತಾರೆ. ಸದರಿ ಭೀಮಣ್ಣನಿಗೆ ಕಲ್ಲಪ್ಪ ಎಂದೂ ಕೂಡಾ ಕರೆಯುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಕಲ್ಲಪ್ಪ ಮತ್ತು ಭೀಮಣ್ಣ ಬೇರೆ-ಬೇರೆಯಾಗಿರುತ್ತಾರೆ ಎನ್ನುತ್ತಾರೆ.

ನಮ್ಮ ಜಮೀನಿನ ಸರ್ವೆ ನಂಬರ ೧ ಇರುತ್ತದೆ. ನಮ್ಮ ಜಮೀನಿನ ಸರ್ವೆ ನಂಬರಿನ ಹಿಸ್ಸಾ ನಂಬರ ನನಗೆ ಹೇಳಲು ಗೊತ್ತಿಲ್ಲ. ನಮ್ಮ ತಂದೆ ರಾಜಅಹಮದರವರು ಶಾಂತಪ್ಪರವರಿಗೆ ೪ ಎಕರೆ ಜಮೀನು ಮಾರಾಟ ಮಾಡಿದ ವಿಚಾರ ನನಗೆ ಗೊತ್ತಿದ್ದರೂ ಸಹ ಅದು ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಾಂತಪ್ಪರವರು ಈಗ ಮೃತರಾಗಿರುತ್ತಾರೆ ಎಂದರೆ ಸರಿ. ಚಂದ್ರಕಾಂತರವರು ಸರ್ವೆ ನಂಬರ ೧ ರಲ್ಲಿ ೪ ಎಕರೆ ಜಮೀನಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾವು ಸುಳ್ಳು ದಾಖಲೆಗಳನ್ನು ಸಲ್ಲಿಸಿ, ನಮೂನೆ-೧೦ ರ ದಾಖಲೆಯನ್ನು ಮಾಡಿಕೊಂಡಿದ್ದೇವು ಎಂದರೆ ಸರಿಯಲ್ಲ.

೬. ಡಿ ಡಿ ಎಲ್ ಆರ್ ರವರ ಹತ್ತಿರ ಸದರಿ ನಮೂನೆ-೧೦ ನ್ನು ಪ್ರಶ್ನಿಸಿ, ವಾದಿಯರು ಅಪೀಲು ಮಾಡಿದ್ದರು ಎಂದರೆ ಸರಿ. ಡಿ ಡಿ ಎಲ್ ಆರ್ ರವರು ಸದರಿ ನಮೂನೆ-೧೦ ನ್ನು ರದ್ದುಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕೇಸಿನಲ್ಲಿ ನಾನೂ ಕೂಡಾ ಪಕ್ಷಗಾರನಿದ್ದು, ನಮೂನೆ-೧೦ ನ್ನು ರದ್ದುಪಡಿಸಿದ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಡಿ ಡಿ ಎಲ್ ಆರ್ ರವರ ಆದೇಶದ ಮೇಲೆ ನಾವು ಯಾವುದೆ ಅಪೀಲು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾವು ೭ ಎಕರೆ ಿ೮ ಗುಂಟೆ ಜಮೀನಿನ ಸ್ವಾಧೀನದಲ್ಲಿ ಇರದೆ ಇದ್ದರೂ ಸಹ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಪಹಣಿಯಲ್ಲಿ ಇರುವಷ್ಟು ಜಮೀನು ನಾವು ಸ್ವಾಧೀನದಲ್ಲಿ ಇರುತ್ತೇವೆ ಎನ್ನುತ್ತಾರೆ. ನನ್ನ ಪ್ರತಿವಾದ ಪತ್ರ ಮತ್ತು ಮುಖ್ಯ ವಿಚಾರಣೆಯ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಅದು ನಮ್ಮ ವಕೀಲರಿಗೆ ಗೊತ್ತು ಎನ್ನುತ್ತಾರೆ. ನಾನು ಹಾಜರುಪಡಿಸಿದ ದಾಖಲೆಗಳ ಬಗ್ಗೆ ನಮ್ಮ ವಕೀಲರಿಗೆ ಗೊತ್ತಿರುತ್ತದೆ.

೭. ಬುರನಸಾಬರವರೂ ಕೂಡಾ ೪ ಎಕರೆ ಜಮೀನು ಮಾರಾಟ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯರು ೧೦ ಎಕರೆ ೩ ಗುಂಟೆ ಜಮೀನಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಇದ್ದಿರಬಹುದು ಎನ್ನುತ್ತಾರೆ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.